**2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಹಾಗೂ ವಿಶೇಷ ನ್ಯಾಯಾಲಯ ದಾವಣಗೆರೆ .**

SC. No.96/2023

ಚಾ.ಸಾ. 24
ಪ್ರಾ.ಸಾ. 10
ಪ್ರ.ವ.ಬೊ.ದಿನಾಂಕ. 05-08-2026

| | | |
|---|---|---|
| ಹೆಸರು | - | ವೀರಬಸಪ್ಪ |
| ತಂದೆ ಹೆಸರು | - | ಲಕ್ಷಪ್ಪ ಕುಸುಲಾಪುರ |
| ವಯಸ್ಸು | - | 39 ವರ್ಷ |
| ಉದ್ಯೋಗ | - | ಪಿಐ, ಕರ್ನಾಟಕ ಲೋಕಾಯುಕ್ತ, ಶಿವಮೊಗ್ಗ |
| ವಾಸ ಸ್ಥಳ | - | ಶಿವಮೊಗ್ಗ |

ಮುಖ್ಯವಿಚಾರಣೆಃ - ಮಾನ್ಯ ಸರ್ಕಾರಿ ಅಭಿಯೋಜಕರಿಂದ

1. ನಾನು ದಿಃ 31-05-2020 ರಿಂದ 19-08-2021 ರವರೆಗೆ ಮಲೆಬೆನ್ನೂರು ಪೊಲೀಸ್ ಠಾಣೆಯಲ್ಲಿ ಪಿಎಸ್ಐ ಎಂದು ಕರ್ತವ್ಯ ನಿರ್ವಹಿಸಿದ್ದೇನೆ.
2. ನಾನು ಈ ಕೇಸಿನ ಪ್ರಕರಣದ ಕಡತವನ್ನು ದಿಃ 13-07-2021 ರಂದು ಚಾ.ಸಾ.23 ರಿಂದ ಪಡೆದುಕೊಂಡು ಕಡತವನ್ನು ಪರಿಶೀಲಿಸಿರುತ್ತೇನೆ. ಅವರು ಎಫ್ ಐ ಆರ್ ದಾಖಲಿಸಿರುತ್ತಾರೆ. ನನಗೆ ಅವರ ಸಹಿ ನೋಡಿದರೆ ಗುರುತಿಸಲು ಆಗುತ್ತದೆ. ನಾನು ಈಗ ನೋಡುತ್ತಿರುವ ನಿ.ಪಿ.1 ರಲ್ಲಿ ಅವರ ಸಹಿ ಇದ್ದು, ಅವರ ಸಹಿಯನ್ನು ನಿ.ಪಿ.1(ಬಿ) ಎಂದು ಗುರುತಿಸಲಾಯಿತು.
3. ನಂತರ ಅದೇ ದಿನ ಪಂಚರುಗಳಾದ ಚಾ.ಸಾ.2 ಮತ್ತು 3 ರವರಿಗೆ ನೋಟೀಸ್ ನಿ.ಪಿ.8 ರಂತೆ ಜಾರಿ ಮಾಡಿದೆನು. ಆ ನೋಟೀಸ್ ಗೆ ನನ್ನ ಸಹಿ ಇದ್ದು, ಆ ಸಹಿಯನ್ನು ನಿ.ಪಿ.8(ಸಿ) ಎಂದು ಗುರುತಿಸಲಾಯಿತು. ಗುನ್ನ ಸ್ಥಳವನ್ನು ಚಾ.ಸಾ.8 ತೋರಿಸಿದರು. ಅಲ್ಲಿ ಸ್ಥಳ ಪಂಚನಾಮೆಯನ್ನು ನಿ.ಪಿ.9 ರಂತೆ ಜರುಗಿಸಿದೆನು. ನಿ.ಪಿ.9 ಕ್ಕೆ ನನ್ನ ಸಹಿ ಇದ್ದು, ಆ ಸಹಿಯನ್ನು ನಿ.ಪಿ.9(ಸಿ) ಎಂದು ಗುರುತಿಸಲಾಯಿತು. ಈಗ ನೋಡುತ್ತಿರುವ ಸಹಿ ಚಾ.ಸಾ.8 ರದ್ದು ಇದ್ದು, ಅದನ್ನು ಸಹ ನಾನು ಗುರುತಿಸುತ್ತೇನೆ. ಅದನ್ನು ನಿ.ಪಿ.9(ಡಿ) ಎಂದು ಗುರುತಿಸಲಾಯಿತು. ಈಗ ನೋಡುತ್ತಿರುವ ನಿ.ಪಿ.10 ರಂತೆ ಕಚ್ಚಾ ನಕಾಶೆಯನ್ನು ನಾನು ತಯಾರಿಸಿರುತ್ತೇನೆ. ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿ.ಪಿ.10(ಸಿ) ಎಂದು ಗುರುತಿಸಲಾಯಿತು. ಆ ಕಾಲಕ್ಕೆ ನಿ.ಪಿ.11 ರಂತೆ ಫೋಟೋವನ್ನು ಚಾ.ಸಾ.13 ರವರಿಂದ ತೆಗೆಸಿರುತ್ತೇನೆ.
4. ನಾವು ಮೇಲಿನ ಪಂಚನಾಮೆ ಮುಗಿಸುವ ಸಮಯಕ್ಕೆ ಆರೋಪಿತರ ಬಗ್ಗೆ ಬಾತ್ಮಿ ಬಂದ ಮೇರೆಗೆ ನಾನು, ಚಾ.ಸಾ.13 ಹಾಗೂ ಜೀಪ್ ಡ್ರೈವರ್ ಜೊತೆಗೆ ಶಾದಿ ಮಹಲ್ ಹತ್ತಿರ ಹೋದೆವು. ಅಲ್ಲಿ ಇಬ್ಬರು ಆಸಾಮಿಗಳು ನಿಂತಿದ್ದು, ಅವರ ಹೆಸರು ವಿಳಾಸ ಕೇಳಿದಾಗ ತಮ್ಮ ಹೆಸರುಗಳನ್ನು ಜಾಪರ್ ಖಾನ್ ಹಾಗೂ ನಯಾಜ್ ಶೇಖ್ ಎಂದು ಹೇಳಿರುತ್ತಾರೆ. ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿತರೇ ಆ ದಿನ ನಾವು ವಿಚಾರಿಸಿದ ಆರೋಪಿಗಳಾಗಿರುತ್ತಾರೆ.

5. ಅವರನ್ನು ಠಾಣೆಗೆ ಕರೆದುಕೊಂಡು ಬಂದು ವಿಚಾರಣೆ ಮಾಡಲಾಗಿ ಅವರು ಸ್ವ ಇಚ್ಛೆ ನೀಡಿದ ಮೇರೆಗೆ ಅವರನ್ನು ದಸ್ತಗಿರಿ ಕ್ರಮ ಅನುಸರಿಸಿ ದಸ್ತಗಿರಿ ಮಾಡಿರುತ್ತೇವೆ.

6. ಆರೋಪಿತರು ತಮ್ಮ ಸ್ವ ಇಚ್ಛಾ ಹೇಳಿಕೆಯಲ್ಲಿ ಅವರನ್ನು ಕರೆದುಕೊಂಡು ಹೋದರೆ ತಾವು ಕೊಲೆ ಮಾಡಲು ಯತ್ನಿಸಿದ ಸ್ಥಳ ಹಾಗೂ ಸ್ವತ್ತನ್ನು ತೋರಿಸುತ್ತೇವೆ ಎಂದು ಹೇಳಿರುತ್ತಾರೆ. ಸದರಿ ಹೇಳಿಕೆಯ ಭಾಗಗಳನ್ನು ನಿ.ಪಿ.18 ಮತ್ತು 19 ಎಂದು ಗುರುತಿಸಲಾಯಿತು.

7. ನಂತರ ಚಾ.ಸಾ.4 ಮತ್ತು 5 ರವರನ್ನು ಬರಮಾಾಡಿಕೊಂಡು ನಿ.ಪಿ.4 ರಂತೆ ನೋಟೀಸನ್ನು ನೀಡಿರುತ್ತೇನೆ. ನಿ.ಪಿ.4 ರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿ.ಪಿ.4(ಬಿ) ಎಂದು ಗುರುತಿಸಲಾಯಿತು. ಅವರ ಸಮಕ್ಷಮ ಆರೋಪಿತರು ತೋರಿಸಿದಂತಹ ಕೃತ್ಯ ನಡೆದ ಸ್ಥಳದಲ್ಲಿ ಅಂದರೆ ಮಲೆಬೆನ್ನೂರಿನ ಪಟ್ಟಣ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಆವರಣದ ಬಾಪೂಜಿ ಹಾಲ್ ಮುಂಭಾಗದ ಹೊರಾಂಡದಲ್ಲಿ ನಿ.ಪಿ.5 ರಂತೆ ಪಂಚನಾಮೆ ಮಾಡಿದೆನು ಹಾಗುಾ ಸ್ಥಳದಲ್ಲಿ ರಕ್ತ ಮಿಶ್ರಿತ ಮಣ್ಣು ಹಾಗೂ ಮಾದರಿ ಮಣ್ಣನ್ನು ಜಪ್ತಿ ಮಾಡಿದೆನು ಹಾಗುಾ ಆರೋಪಿತರು ತೋರಿಸಿದ ಮರದ ಕಟ್ಟಿಗೆ ಮತ್ತು ಕಬ್ಬಿಣದ ರಾಡು (ಮು.ಮಾ.1 ಮತ್ತು 3) ನ್ನು ಜಪ್ತಿ ಮಾಡಿಕೊಂಡೆನು. ಈಗ ನೋಡುತ್ತಿರುವ ಪಂಚನಾಮೆ ಆ ದಿನ ನಾನು ಬರೆದ ಪಂಚನಾಮೆಯಾಗಿದ್ದು, ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿ.ಪಿ.5(ಬಿ) ಎಂದು ಗುರುತಿಸಲಾಯಿತು. ಹಾಗುಾ ಸ್ಥಳದಲ್ಲಿ ನಿ.ಪಿ.6 ರಂತೆ ಪೋಟೋ ತೆಗೆಸಿರುತ್ತೇನೆ. ಅಲ್ಲಿ ದೊರೆತಂತಹ ಮುದ್ದೆಮಾಲುಗಳನ್ನು ಠಾಣಾ ಪಿಎಪ್ ನಂ.80/2021 ರಂತೆ ಮ್ಯಾಜಿಸ್ಟ್ರೇಟರ್ ಗೆ ವರದಿ ನೀಡಿರುತ್ತೇನೆ.

8. ಅದೇ ದಿನ ಈ ಪ್ರಕರಣದ ಪಿರ್ಯಾದುದಾರ ಹಲ್ಲೆ ಗೊಳಗಾದ ದಿನ ಧರಿಸಿದ ರಕ್ತ ಸಿಕ್ತ ಹಸಿರು ಬಣ್ಣದ ಟೀಶರ್ಟ್ ಹಾಗುಾ ಜೀನ್ಸ್ ಪ್ಯಾಂಟನ್ನು ಠಾಣೆಗೆ ತಂದು ಹಾಜರುಪಡಿಸಿದ್ದು, ಅವುಗಳನ್ನು ಪಂಚರಾದ ಚಾ.ಸಾ.6 ಮತ್ತು 7 ಇವರನ್ನು ನಿ.ಪಿ.7 ರಂತೆ ನೋಟೀಸ್ ಕೊಟ್ಟು ಕರೆಯಿಸಿರುತ್ತೇನೆ. ಈಗ ನೋಡುತ್ತಿರುವ ನೋಟೀಸ್ ನಲ್ಲಿ ನನ್ನ ಸಹಿ ಇದ್ದು, ಅದನ್ನು ನಿ.ಪಿ.7(ಬಿ) ಎಂದು ಗುರುತಿಸಲಾಯಿತು. ಹಾಗುಾ ಆ ಬಟ್ಟೆಯನ್ನು ನಿ.ಪಿ.2 ರಂತೆ ಪಂಚನಾಮೆ ಮಾಡಿ ಜಪ್ತಿ ಮಾಡಿರುತ್ತೇನೆ. ನಿ.ಪಿ.2 ಕ್ಕೆ ನನ್ನ ಸಹಿ ಇದ್ದು, ಆ ಸಹಿಯನ್ನು ನಿ.ಪಿ.2(ಸಿ) ಎಂದು ಗುರುತಿಸಲಾಯಿತು. ಸದರಿ ಪಂಚನಾಮೆ ಕಾಲಕ್ಕೆ ನಿ.ಪಿ.3 ರಂತೆ ಪೋಟೋ ತೆಗೆಸಿರುತ್ತೇನೆ.

9. ನಂತರ ಆ ಬಟ್ಟೆಗಳನ್ನು ಬಿಳಿ ಬಟ್ಟೆ ಚೀಲದಲ್ಲಿ ಹಾಕಿ ಅರಗಿನಿಂದ ಸೀಲು ಮಾಡಿದೆನು. ಈಗ ನೋಡುತ್ತಿರುವ ಮು.ಮಾ.5 ಮತ್ತು 7 ಆ ದಿನ ಪಿರ್ಯಾದಿ ಕೊಟ್ಟ ಹಾಗೂ ನಾನು ಜಪ್ತಿ ಮಾಡಿದ ಮುದ್ದೆಮಾಲುಗಳಾಗಿರುತ್ತವೆ. ಮು.ಮಾ.5 ಮತ್ತು 7 ರ ಮೇಲೆ ಅಲ್ಲಲ್ಲಿ ರಕ್ತದ ಕಲೆಗಳು ಆಗಿದ್ದವು. ಅವುಗಳನ್ನು ಠಾಣಾ ಮಾಲುಪಟ್ಟಿ ಸಂಖ್ಯೆ: 81/2021 ರಂತೆ ನಮೂದು ಮಾಡಿ ನ್ಯಾಯಾಲಯದ ಅನುಮತಿಯೊಂದಿಗೆ ಅವುಗಳನ್ನು ಎಪ್ ಎಸ್ ಎಲ್ ಗೆ ಚಾ.ಸಾ.21 ರ ಮುಖಾಂತರ ಕಳುಹಿಸಿದೆನು.

10. ಹಾಗೂ ಆ ದಿನ ನಾನು ಚಾ.ಸಾ.1 ರ ಮರುಹೇಳಿಕೆ, ಚಾ.ಸಾ.8 ರಿಂದ 12 ರವರ ಹೇಳಿಕೆಗಳನ್ನು ಹಾಗೂ ಚಾ,ಸಾ.13 ರಿಂದ 16 ರವರ ಹೇಳಿಕೆಯನ್ನು ಪಡೆದಕೊಂಡೆನು. ಚಾ.ಸಾ.9 ಮತ್ತು 10 ನನ್ನ ಮುಂದೆ ನಿ.ಪಿ.12 ಮತ್ತು 13 ರಂತೆ ಹೇಳಿಕೆ ನೀಡಿರುತ್ತಾರೆ. ಚಾ.ಸಾ.13 ಅವರು ಪೋಟೋ ತೆಗೆದ

ಕುರಿತು ನನ್ನ ಮುಂದೆ ಹೇಳಿಕೆ ನೀಡಿರುತ್ತಾರೆ. ಹಾಗೂ ಈಗ ನೋಡುತ್ತಿರುವ 65 ಬಿ ಪ್ರಮಾಣ ಪತ್ರವನ್ನು ಅವರು ನೀಡಿರುತ್ತಾರೆ. ಸದರಿ ಪ್ರಮಾಣ ಪತ್ರವನ್ನು ನಿ.ಪಿ.20 ಎಂದು ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.20(ಎ) ಎಂದು ಗುರುತಿಸಲಾಯಿತು. ಹಾಗೂ ನಮ್ಮ ಸಿಬ್ಬಂದಿಯವರ ಸಹಿಯನ್ನು ನಾನು ಗುರುತಿಸುತ್ತಿದ್ದು, ಅದನ್ನು ನಿ.ಪಿ.20(ಬಿ) ಎಂದು ಗುರುತಿಸಲಾಯಿತು.

11. ನನ್ನ ವರ್ಗಾವಣೆ ಪ್ರಯುಕ್ತ ಮುಂದಿನ ತನಿಖೆಯನ್ನು ಚಾ.ಸಾ.25 ಇವರಿಗೆ ನೀಡಿರುತ್ತೇನೆ.

**ಪಾಟೀಸವಾಲುಃ ಆರೋಪಿ 1 ಮತ್ತು 2 ರ ಪರ ಶ್ರೀ ಎಸ್ ಟಿ ಆರ್ ವಕೀಲರಿಂದ.**

12. ಮಲೆಬೆನ್ನೂರು ಸರ್ಕಾರಿ ಶಾಲೆಯ ಬಾಪೂಜಿ ಹಾಲ್ ನಮ್ಮ ಠಾಣೆಯಿಂದ ಅರ್ಧ ಕಿಮೀ ಒಳಗೆ ಇರುತ್ತದೆ. ಸರ್ಕಾರಿ ಶಾಲೆ ಊರ ಮಧ್ಯೆ ಇದೆ. ಸಾಕ್ಷಿಯು ಆ ಬಾಪೂಜಿ ಹಾಲ್ ವರಾಂಡ ಪಾಳು ಬಿದ್ದ ಪ್ರದೇಶವಾಗಿದ್ದು, ಅಲ್ಲಿ ಯಾರು ಓಡಾಡುವುದಿಲ್ಲ ಎನ್ನುತ್ತಾರೆ. ಆ ಹಾಲ್ ಸುಮಾರು 150 ವರ್ಷ ಹಳೆಯದು ಇರಬಹುದು ಎಂದರೆ ಸಾಕ್ಷಿಯು 50-60 ವರ್ಷಗಳ ಹಳೆಯದು ಇರಬಹುದು ಎನ್ನುತ್ತಾರೆ.

13. ಬಾಪೂಜಿ ಹಾಲ್ ಸುತ್ತಲೂ ಇರುವ ಶಾಲೆ ಕಟ್ಟಡದ ರೂಮ್ ಗಳು ಪಾಳು ಬಿದ್ದಿವೆ ಎಂದರೆ ಸಾಕ್ಷಿಯು ಆಗ ಬಿದ್ದಿರಲಿಲ್ಲ ಎನ್ನುತ್ತಾರೆ. ಬಾಪೂಜಿ ಹಾಲ್ ನ 5 ರಿಂದ 10 ಅಡಿ ಎದುರಿನಲ್ಲಿ ಎರಡು ಅಂತಸ್ತಿನ ಹೊಸ ಬಿಲ್ಡಿಂಗ್ ಕಟ್ಟಿಸುತ್ತಿದ್ದಾರೆ ಎಂದರೆ ಸಾಕ್ಷಿಯು ಇರಬಹುದು ನಾನು ಗಮನಿಸಿಲ್ಲ ಎನ್ನುತ್ತಾರೆ. ಬಾಪೂಜಿ ಹಾಲ್ ನ ಶಾಲೆಯ ಎದುರುಗಡೆ ಸ್ಟಾಫ್ ರೂಮ್ ಮತ್ತು ಸ್ಕೂಲ್ ರೂಮ್ ಗಳು ಲೈನಾಗಿವೆ ಎಂದರೆ ಸಾಕ್ಷಿಯು ನನಗೆ ಗಾಯಾಳು ತೋರಿಸಿದ ಸ್ಪಾಟ್ ಅನ್ನು ಮಾತ್ರ ನೋಡಿದ್ದೇನೆ ಎನ್ನುತ್ತಾರೆ.

14. ಬಾಪೂಜಿ ಹಾಲ್ ಬಲಗಡೆ ಬಾಲಕರ ಮತ್ತು ಬಾಲಕಿಯ ಶಾಲೆ ಮತ್ತು ಕಾಲೇಜ್ ಗಳು ಬರುತ್ತವೆ ಎಂದರೆ ಸಾಕ್ಷಿಯು ಇನ್ನಿತರ ಶಾಲೆಗಳು ಬರುತ್ತವೆ ಎನ್ನುತ್ತಾರೆ. ಬಾಪೂಜಿ ಹಾಲ್ ಪಕ್ಕದಲ್ಲಿ ಬಾಲಕರ ವಿದ್ಯಾರ್ಥಿ ನಿಲಯಬರುತ್ತದೆ ಎಂದರೆ ಸಾಕ್ಷಿಯು ನೋಡಿ ಬಹಳ ದಿವಸಗಳಾಗಿದ್ದರಿಂದ ಲಕ್ಷ್ಯ ಇಲ್ಲ ಎನ್ನುತ್ತಾರೆ. ಬಾಪೂಜಿ ಹಾಲ್ ಹಿಂದುಗಡೆ ನಾಡಕಛೇರಿ, ಪುರಸಭೆ, ಸರ್ಕಾರಿ ಆಸ್ಪತ್ರೆ ಬರುತ್ತವೆ. ಸಾಕ್ಷಿಯು ಅವು ಬೇರೆ ಬೇರೆ ಕಾಂಪೌಂಡ್ ಗಳಲ್ಲಿ ಬರುತ್ತವೆ ಎನ್ನುತ್ತಾರೆ.

15. ಬಾಪೂಜಿ ಹಾಲ್ ಸ್ವಲ್ಪ ದೂರದಲ್ಲಿ ಜಿಗಳಿ ಸರ್ಕಲ್ ಮತ್ತು ಬಸ್ಟ್ಯಾಂಡ್ ಬರುತ್ತದೆ ಅನ್ನುವುದು ಸುಳ್ಳು. ಬಾಪೂಜಿ ಹಾಲ್ ಎದುರುಗಡೆ ನಿಂತರೆ ಜಿಗಳಿ ಮತ್ತು ನಂದಿಗುಡಿಗೆ ಹೋಗುವ ಬಸ್ ಗಳು ಕಾಣಿಸುತ್ತವೆ ಎನ್ನುವುದು ಸುಳ್ಳು. ಅಲ್ಲಿ ಬಸ್ಟ್ಯಾಂಡ್ ಇದ್ದುದರಿಂದ ಸಾಕಷ್ಟು ವಾಹನಗಳು ಇರುತ್ತವೆ ಎನ್ನುವುದು ಸುಳ್ಳು.

16. ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಹೈಸ್ಕೂಲ್ ಮತ್ತು ಕಾಲೇಜ್ ಸೇರಿ ಇವೆ ಎನ್ನುವುದು ನಿಜ. ಆ ರೀತಿ ಎರಡು ಒಂದೇ ಬಿಲ್ಡಿಂಗ್ ನಲ್ಲಿ ಇರುವುದರಿಂದ ಕಾಲೇಜ್ ಬೆಳಿಗ್ಗೆ 7-30 ಯಿಂದ 12-00 ಗಂಟೆಯವರೆಗೆ ಹಾಗೂ ಹೈಸ್ಕೂಲ್ 12-45 ರಿಂದ 4-45 ರವರೆಗೆ ಇರುತ್ತವೆ ಎಂದರೆ ಸಾಕ್ಷಿಯು ನಾವು ಹೋದಾಗ ಆ ರೀತಿ ಯಾವುದೇ ತರಗತಿಗಳು ನಡೆಯುತ್ತಿರಲಿಲ್ಲ ಎನ್ನುತ್ತಾರೆ.

17. ನೀವು ಪಂಚನಾಮೆ ಮಾಡಲು ಹೆಡ್ ಮಾಸ್ಟರ್ ಅನುಮತಿ ಪಡೆದಿರಾ ಎಂದರೆ ಸಾಕ್ಷಿಯು ಆ ವರಾಂಡ ಪಾಳು ಬಿದ್ದಿತ್ತು ಮತ್ತು ಹೋಗಲು ಬೇರೆ ರಸ್ತೆ ಇತ್ತು ಎನ್ನುತ್ತಾರೆ. ಬೇರೆ ರಸ್ತೆ ಎಂದರೆ ಯಾವುದು ಎಂದರೆ ಸಾಕ್ಷಿಯು ಶಾಲೆ ಮತ್ತು ಕಾಲೇಜ್ ಗೆ ಹೋಗಲು ಬೇರೆ ರಸ್ತೆ ಇದೆ ಹಾಗೂ ಕೃತ್ಯ ನಡೆದ ಸ್ಥಳಕ್ಕೆ ಹೋಗಲು

ಪ್ರತ್ಯೇಕ ಮಣ್ಣಿನ ರಸ್ತೆ ಇದೆ. ಅಲ್ಲಿ ಅನೈತಿಕ ಚಟುವಟಿಕೆಗಳು ರಾತ್ರಿ ಆಗುತ್ತವೆ. ನಾವು ಆ ರಸ್ತೆಯಿಂದ ಹೋದೆವು.

18. ಚಾ.ಸಾ.1 ಬಡ್ಡಿ ವ್ಯವಹಾರ ಮಾಡುತ್ತಿದ್ದ ಎಂಬುದು ನನಗೆ ಗೊತ್ತಿಲ್ಲ. ನಾನು ಸಾಕಷ್ಟು ಸಲ ಕರೆಯಿಸಿ ಆತನಿಗೆ ಎಚ್ಚರಿಕೆ ನೀಡಿದ್ದೇನೆ ಎನ್ನುವುದು ಸುಳ್ಳು.

19. ದಿಃ 13-07-2021 ಮಂಗಳವಾರ ಬರುತ್ತದೆ ಎಂದರೆ ಸಾಕ್ಷಿಯು ಅದು ಗೊತ್ತಿಲ್ಲ ಎನ್ನುತ್ತಾರೆ. ನಾನು ಪಂಚನಾಮೆ ಮಾಡಿದ ಸಮಯ ಶಾಲಾ ಕಾಲೇಜು ನಡೆಯುವ ಸಮಯ ಎಂದರೆ ಸಾಕ್ಷಿಯು ನಾವು ಪ್ರತ್ಯೇಕವಾಗಿ ಬೆಳಿಗ್ಗೆ 7-30 ಯಿಂದ ಪಂಚನಾಮೆ ಮಾಡಿರುತ್ತೇವೆ ಎನ್ನುತ್ತಾರೆ.

20. ಪಂಚರಿಗೆ ನೊಟೀಸನ್ನು ಸಂತೋಷ್ ಎಂಬ ಕಾನ್ಸೆಬಲ್ ಮುಖಾಂತರ ಜಾರಿ ಮಾಡಿರುತ್ತೇನೆ. ನಾನು ಅವರಿಗೆ ನೋಟೀಸನ್ನು 7-15 ಕ್ಕೆ ಕೊಟ್ಟಿರುತ್ತೇನೆ. ನಿ.ಪಿ.5 ಮತ್ತು 9 ರಲ್ಲಿ ಇರುವ ಎರಡು ಸ್ಥಳಗಳ ಚೆಕ್ ಬಂದಿ ಒಂದೇ ಆಗಿರುತ್ತದೆ. ನಿ.ಪಿ.11 ರಲ್ಲಿ ಮೇಸ್ಟ್ರು ಹಾಗೂ ವಿದ್ಯಾರ್ಥಿಗಳು ಕಾಣುತ್ತಾರೆ ಎಂದರೆ ಸಾಕ್ಷಿಯು ಅಲ್ಲಿ ಜನ ನಿಂತಿದ್ದರು ಯಾರು ಎಂದು ಗೊತ್ತಿಲ್ಲ ಎನ್ನುತ್ತಾರೆ. ನಿ.ಪಿ.6 ರಲ್ಲೂ ಸಹ ಜನ ಕಾಣಿಸುತ್ತಾರೆ. ನಿ.ಪಿ.6 ಮತ್ತು 11 ರಲ್ಲಿ ಇರುವ ವ್ಯಕ್ತಿ ಒಬ್ಬನೇ ಇರಬಹುದು. ಆ ವ್ಯಕ್ತಿಯನ್ನು ಗುರುತಿಗಾಗಿ ನಿ.ಪಿ.6(ಎ) ಎಂದು ಮತ್ತು ನಿ.ಪಿ.11(ಎ) ಎಂದು ಗುರುತಿಸಲಾಯಿತು.

21. ನಾನು ಘಟನಾ ಸ್ಥಳದ ಶಿಕ್ಷಕರಾಗಲಿ ಹಾಗೂ ವಿದ್ಯಾರ್ಥಿಗಳದಾಗಲಿ ಹೇಳಿಕೆ ಪಡೆದಿಲ್ಲ. ನಾನು ಸ್ಕೂಲಿನ ಹೆಡ್ ಮಾಸ್ಟರ್ ನ ಅನುಮತಿ ಪಡೆದಿಲ್ಲ.

22. ಆ ಶಾಲೆಯಲ್ಲಿ ಆವರಣ ಇರುವುದರಿಂದ ಸಾಕಷ್ಟು ಜನ ಯೋ ಮಾಡುವುದು ವಾಕ್ ಮಾಡುವುದು ಮಾಡುತ್ತಾರೆ ಎನ್ನುವುದು ಸುಳ್ಳು. ರಾತ್ರಿ ಸಹ ಊಟ ಆದ ಮೇಲೆ ಸಾಕಷ್ಟು ಜನ ವಾಕ್ ಮಾಡುತ್ತ ಇರುತ್ತಾರೆ ಎನ್ನುವುದು ಸುಳ್ಳು. ಪಕ್ಕದಲ್ಲಿ ಹಾಸ್ಟೆಲ್ ಇರುವುದರಿಂದ ವಿದ್ಯಾರ್ಥಿಗಳು ಆಟವಾಡುತ್ತಿರುತ್ತಾರೆ ಎನ್ನುವುದು ಸುಳ್ಳು. ಹಾಸ್ಟೆಲ್ ಪಕ್ಕ ಗಣೇಶ ಥೇಟರ್ ಬರುತ್ತದೆ ಎಂಬುದು ಗೊತ್ತಿಲ್ಲ, ಸಾಕ್ಷಿಯು ಇರಬಹುದು, ಆದರೆ ಅದು ಮುಚ್ಚಿತ್ತು ಎನ್ನುತ್ತಾರೆ.

23. ನಾವು ಏನೇ ಕೆಲಸ ಮಾಡಬೇಕಾದರೂ ಠಾಣಾ ದಿನಚರಿಯಲ್ಲಿ ನಮೂದು ಮಾಡುತ್ತೇವೆ. ಸಾಕ್ಷಿಯು ಕೇವಲ ಪ್ರಮುಖ ಘಟನಾವಳಿಗಳನ್ನು ಎನ್ನುತ್ತಾರೆ. ಈ ಕೇಸಿಗೆ ಸಂಬಂಧಪಟ್ಟಂತೆ ನಾನು ಠಾಣಾ ದಿನಚರಿಯಲ್ಲಿ ನಮೂದು ಮಾಡಿರುತ್ತೇನೆ. ದೂರುದಾರ ಸುಮಾರು 6 ರಿಂದ 6 1/2 ಅಡಿ ಎತ್ತರ ಇದ್ದಾನೆ ಎಂದರೆ ಸಾಕ್ಷಿಯು ಎತ್ತರ ಸರಿಯಾಗಿ ಗೊತ್ತಿಲ್ಲ, ಆದರೆ ಎತ್ತರ ಇದ್ದಾನೆ ಎನ್ನುತ್ತಾರೆ. ಆತ ಆರೋಪಿತರಿಗಿಂತ ಹೆಚ್ಚು ಉದ್ದ ಇದ್ದಾನೆ ಎನ್ನುವುದು ಸುಳ್ಳು. ಆತ ಉದ್ದ ಇದ್ದಾನೆ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸುಳ್ಳು.

24. ದಿಃ 13-07-2021 ರಂದು ಶಾದಿ ಮಹಲ್ ಹತ್ತಿರ ಹೋದಾಗ ಆರೋಪಿತರನ್ನು ದಸ್ತಗಿರಿ ಮಾಡಲು ದಸ್ತಗಿರಿ ಕ್ರಮ ಅನುಸರಿಸಿದ್ದೀರಾ ಎಂದರೆ ಸಾಕ್ಷಿಯು ಅವರೇ ಅಂತಾ ಖಚಿತಪಡಿಸಿಕೊಂಡು ಠಾಣೆಗೆ ಕರೆದುಕೊಂಡು ಹೋದೆವು ಎನ್ನುತ್ತಾರೆ. ಶಾದಿ ಮಹಲ್ ಹತ್ತಿರದಿಂದ ಆರೋಪಿತರನ್ನು ಕರೆದುಕೊಂಡು ಬಂದೆವು ಎಂದು ನನ್ನ ತನಿಖೆಯಲ್ಲಿ ಬರೆದಿಲ್ಲ. ನೀವು ಶಾದಿ ಮಹಲ್ ಹತ್ತಿರ ಚಾ.ಸಾ.1 ನ್ನು ಕರೆಯಿಸಿ

ಆರೋಪಿತರೇ ಹಲ್ಲೆ ಮಾಡಿದವರು ಎಂದು ಕೇಳಲು ಪ್ರಯತ್ನಿಸಿದಿರಾ  ಎಂದರೆ ಸಾಕ್ಷಿಯು ಚಾ,ಸಾ.1 ಈತನಿಗೆ ತಲೆಗೆ ಪೆಟ್ಟು ಬಿದ್ದು, 13 ಹೊಲಿಗೆಗಳು ಬಿದ್ದಿದ್ದವು ಹಾಗೂ ಎಫ್ ಐ ಆರ್ ನಲ್ಲಿ ಆರೋಪಿತರ ಹೆಸರುಗಳು ನಮೂದು ಇತ್ತು. ಆರೋಪಿತರು ಇದಕ್ಕೂ ಮೊದಲು ನನಗೆ ಪರಿಚಯ ಇಲ್ಲ.

25. ದೂರುದಾರರೊಂದಿಗೆ ಯಾರು ಯಾರು ಬಂದಿದ್ದರು, ಏನು ಎಂಬುದು ಎಫ್ ಐ ಆರ್ ಮಾಡಿದವರಿಗೆ ಗೊತ್ತು. ನಿ.ಪಿ.1 ಎಲ್ಲಿ ಕಂಪ್ಯೂಟರೈಸ್ ಮಾಡಿಸಿದರು, ಯಾರು ತಯಾರು ಮಾಡಿದರು ಎಂದು ತನಿಖೆ ಮಾಡಲಿಲ್ಲ. ನಿ.ಪಿ.6 ಮತ್ತು 11 ರಲ್ಲಿ ಇರುವ ಸ್ಥಳ ಒಂದೇ ಇದೆ. ನಿಮಗೆ ಸ್ಥಳ ಪಂಚನಾಮೆ ಮಾಡುವಾಗ (ನಿ.ಪಿ.5) ರಕ್ತ ಮಿಶ್ರಿತ ಮಣ್ಣು ಅಥವಾ ಮುದ್ದೆಮಾಲುಗಳೇನಾದರೂ ಸಿಕ್ಕವಾ ಎಂದರೆ ಸಾಕ್ಷಿಯು ನಾನು ಪಂಚನಾಮೆ ಮಾಡಿದ ನಂತರ ಆರೋಪಿಯು ಹಲ್ಲೆ ಮಾಡಿ ಮುದ್ದೆಮಾಲು ಮುಚ್ಚಿಟ್ಟ ಸ್ಥಳ ಇದೆ ಎಂದು ತೋರಿಸಿದ ಕಾರಣ ನಿ.ಪಿ.9 ರಂತೆ ಪಂಚನಾಮೆ ಮಾಡಿ ನಿ.ಪಿ.6 ನ್ನು ತೆಗೆಸಿರುತ್ತೇನೆ ಎನ್ನುತ್ತಾರೆ. ನಿ.ಪಿ.5 ಪಂಚನಾಮೆ ಮಾಡಿದಾಗ ಯಾವುದೇ ಮುದ್ದೆಮಾಲು ಮತ್ತು ರಕ್ತ ಮಿಶ್ರಿತ ಮಣ್ಣು ಇರಲಿಲ್ಲ. ಹಾಗೂ ನಿ.ಪಿ.11 ತೆಗೆಸಿದಾಗಲೂ ಸಹ ಯಾವುದೇ ಮುದ್ದೆಮಾಲು ಇರಲಿಲ್ಲ.

26. ನಿ.ಪಿ.10 ರ ಕಚ್ಚಾ ನಕಾಶೆ ತೋರಿಸಿ ಈಗ ತೋರಿಸುತ್ತಿರುವ ಒಂದೇ ಒಳಗೆ ಹೋಗುವ ದಾರಿ ಎಂದರೆ ಸಾಕ್ಷಿಯು ಅದು ಇದೆ, ಆದರೆ ಅಲ್ಲಲ್ಲಿ ಗೋಡೆ ಬಿದ್ದುದರಿಂದ ಒಳಗೆ ಹೋಗಲು ಸ್ಥಳ ಇದೆ ಎನ್ನುತ್ತಾರೆ. ಸದರಿ ತೋರಿಸಿದ ಸ್ಥಳವನ್ನು ನಿ.ಪಿ.10(ಡಿ) ಎಂದು ಗುರುತಿಸಲಾಯಿತು.  ನನ್ನ ಜೀಪನ್ನು ಗೇಟಿನಿಂದ ಹೊರಗಡೆ ನಿಲ್ಲಿಸಿ ಹೋಗಿದ್ದೆನು. ಸರ್ಕಲ್ ಹಾಗೂ ಗೇಟ್ ಹೊಂದಿಕೊಂಡು ಇವೆ ಎಂಬುದು ಸುಳ್ಳು. ನಿ.ಪಿ.10 ನ್ನು ನೋಡಿ ಜಿಗಳಿ ಸರ್ಕಲ್ ಎಲ್ಲಿ ಬರುತ್ತದೆ ಎಂದರೆ ಸಾಕ್ಷಿಯು ನೋಡಿ ಬಹಳ ದಿನಗಳಾಗಿದ್ದರಿಂದ ನೆನಪಿಲ್ಲ ಎನ್ನುತ್ತಾರೆ.

27. ನಾವು ಪಂಚನಾಮೆಯಲ್ಲಿ ಜಿಗಳಿ ಸರ್ಕಲ್ ದಾಟಿ ಹೈಸ್ಕೂಲ್ ಕಾಂಪೌಂಡ್ ಒಳಗೆ ಹೋಗಿದ್ದೇವೆ ಎಂದು ಬರೆದಿದ್ದೇವೆ. ಸಾಕ್ಷಿಯು ಜಿಗಳಿ ಸರ್ಕಲ್ ದಾಟಿ ಸಿಗುವ ರೋಡಿನ ಹತ್ತಿರ ಜೀಪ್ ನಿಲ್ಲಿಸಿದ್ದೆವು ಎನ್ನುತ್ತಾರೆ. ನಾವು ಗೇಟಿನಿಂದ ಕೃತ್ಯ ಸ್ಥಳಕ್ಕೆ ಹೋಗಲು ಆಪೀಸ್ ರೂಮ್ ಮುಂದೆ ಹೋಗಬೇಕು ಎಂದರ ಸಾಕ್ಷಿಯು ಆಪೀಸ್ ರೂಮ್ ಬರುವುದಿಲ್ಲ ಎನ್ನುತ್ತಾರೆ. ಗೇಟ್ ಮುಂದುಗಡೆ ಆಪೀಸ್ ರೂಮ್ ಇದೆ ಎಂದರೆ ಲಕ್ಷ್ಯ ಇಲ್ಲ ಎನ್ನುತ್ತಾರೆ. ಕಂಪೌಂಡ್ ನಲ್ಲಿ ಬಾಪೂಜಿ ಹಾಲ್ ಮಧ್ಯದಲ್ಲಿ ಬರುತ್ತದೆ ಹಾಗುಾ ಬಾಪೂಜಿ ಹಾಲ್ ಸುತ್ತ ಮುತ್ತ ಆರು ಶಾಲೆಗಳ ಬಿಲ್ಡಿಂಗ್ ಗಳು ಬರುತ್ತವೆ ಎನ್ನುವುದು ಗೊತ್ತಿಲ್ಲ. ಬಿಲ್ಡಿಂಗ್ ಪಾಳು ಬಿದ್ದಿದ್ದರಿಂದ ಯಾವಾಗಲೂ ಕತ್ತಲು ಇರುತ್ತದೆ ಎಂದರೆ ಸಾಕ್ಷಿಯು ರಾತ್ರಿ ಹೊತ್ತು ಕತ್ತಲಿನಿಂದ ಕೂಡಿರುತ್ತದೆ ಎನ್ನುತ್ತಾರೆ.

28. ಬಾಪೂಜಿ ಹಾಲ್ ಬಿಲ್ಡಿಂಗ್ ಕತ್ತಲಿನಿಂದ ಪಾಳು ಬಿದ್ದಿದ್ದರಿಂದ ಅಲ್ಲಿ ಅನೈತಿಕ ಕೃತ್ಯ ನಡೆಯಬಹುದೆಂದು ನಾವು ಮೇಲಿಂದ ಮೇಲೆ ಗಸ್ತಿಗೆ ಹೋಗುತ್ತೇವೆ ಎಂದರೆ ಸಾಕ್ಷಿಯು ದೂರು ಬಂದಲ್ಲಿ ಮಾತ್ರ ಅಲ್ಲಿ ಹೋಗುತ್ತೇವೆ, ದಿನಾಲೂ ಒಂದೊಂದು ಕಡೆ ಗಸ್ತಿಗೆ ಹೋಗುತ್ತೇವೆ ಎನ್ನುತ್ತಾರೆ. ಹಾಸ್ಟೆಲ್ ಮಕ್ಕಳ ಸುರಕ್ಷತೆಯಿಂದ ನೈಟ್ ಬೀಟ್ ಬುಕ್ ಇಟ್ಟಿರುತ್ತಾರೆ ಎಂಬುದು ಗೊತ್ತಿಲ್ಲ.

29. ಆ ದಿನ ಆರೋಪಿತರನ್ನು ಕರೆದುಕೊಂಡು ಬಂದೆ, ಹೇಳಿಕೆ ಪಡೆದುಕೊಂಡೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸುಳ್ಳು. ಆರೋಪಿತರ ಹೇಳಿಕೆ ಮೇರೆಗೆ ಮುದ್ದೆಮಾಲನ್ನು ಜಪ್ತಿ ಮಾಡಿದೆ ಹಾಗೂ ಸ್ಥಳಕ್ಕೆ ಹೋಗಿ ಪಂಚನಾಮೆ ಮಾಡಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸುಳ್ಳು.

30. ಮಲೆಬೆನ್ನೂರು ಆಸ್ಪತ್ರೆಯಲ್ಲಿ ಯಾವುದೇ ಎಂಎಲ್ ಸಿ ಪ್ರಕರಣ ಬಂದರೆ ನಮಗೆ ಮಾಹಿತಿ ಬರುತ್ತದೆ. ಆ ರೀತಿ ಮಾಹಿತಿ ಬಂದ ತಕ್ಷಣ ಠಾಣೆಯಲ್ಲಿದ್ದ ಪೋಲೀಸರು ಹೋಗಿ ಬೇಕಾದ ಹೇಳಿಕೆ ಪಡೆಯುವುದು ಮಾಡುತ್ತೇವೆ.

31. ಈ ತರಹದ ಸೀರಿಯಸ್ ಕೃತ್ಯ ಇದ್ದರೆ ತಕ್ಷಣವೇ ದೂರು ದಾಖಲಾಗುತ್ತದೆ ಎಂಬುದು ನಿಜ. 2 ನೇ ಆರೋಪಿ ಪುನಃ ಕಬ್ಬಿಣದ ರಾಡಿನಿಂದ ಹಲ್ಲೆ ಮಾಡಿದ ಎಂದು ಉಲ್ಲೇಖವಿದೆಯೇ ಎಂದರೆ ಸಾಕ್ಷಿಯು ನನಗೆ ಎಫ್ ಐ ಆರ್ ಆದ ಮೇಲೆ ಬಂದಿದೆ ಎನ್ನುತ್ತಾರೆ. ಕಂಪ್ಲೆಂಟ್ ನಲ್ಲಿ ಮೂರು ಜನ ಆರೋಪಿತರಿದ್ದು, ಇನ್ನೊಬ್ಬರ ಬಗ್ಗೆ ತನಿಖೆ ಮಾಡಿದಿರಾ ಎಂದರೆ ಸಾಕ್ಷಿಯು ಮರುಹೇಳಿಕೆಯಲ್ಲಿ ಚಾ.ಸಾ.1 ಇಬ್ಬರೇ ಇದ್ದರು ಎಂದು ಹಾಗೂ ತಲೆಗೆ ಹೊಡೆತ ಬಿದ್ದುದರಿಂದ ಇಬ್ಬರೇ ಇದ್ದರು ಎಂದು ಹೇಳುತ್ತಾರೆ.

32. ನಿ.ಡಿ.1 ರ ಪ್ರಕಾರ ಚಾ.ಸಾ.1 ಹೇಳಿಕೆ ನೀಡಿರುತ್ತಾರೆ. ದಿಃ 12-07-2021 ರಂದು ಚಾ.ಸಾ.1 ದೂರು ಕೊಟ್ಟ ಅನ್ನುವುದು ಸುಳ್ಳು. ದಿಃ 13-07-2021 ರಂದು ಬೆಳಿಗ್ಗೆ ಮತ್ತು ಮಧ್ಯಾಹ್ನ ಸ್ಥಳಕ್ಕೆ ಹೋಗಿ ಸ್ಥಳ ಪಂಚನಾಮೆ ಮತ್ತು ಮುದ್ದೆಮಾಲು ಜಪ್ತಿ ಮಾಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸುಳ್ಳು. ಎಲ್ಲಾ ಪಂಚರಿಗೆ ನೋಟೀಸ್ ಕೊಟ್ಟು ಕರೆಯಿಸಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸುಳ್ಳು. ಅದೇ ದಿನ ಆರೋಪಿತರು ಶಾದಿ ಮಹಲ್ ಹತ್ತಿರ ಸಿಕ್ಕರು, ಅವರನ್ನು ಠಾಣೆಗೆ ಕರೆದುಕೊಂಡು ಹೋಗಿ ದಸ್ತಗಿರಿ ಮಾಡಿ ಸ್ವ ಇಚ್ಚಾ ಹೇಳಿಕೆ ಪಡೆದುಕೊಂಡೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸುಳ್ಳು.

33. ಅದೇ ದಿನ ಚಾ.ಸಾ.1 ಪ್ಯಾಂಟ್ ಶರ್ಟಗಳನ್ನು ಕೊಟ್ಟರು ಅದನ್ನು ಜಪ್ತಿ ಮಾಡಿಕೊಂಡೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸುಳ್ಳು. ಚಾ.ಸಾ.1 ರ ಮರುಹೇಳಿಕೆ ಮತ್ತು ಚಾ.ಸಾ.8 ರಿಂದ 12 ರ ಹೇಳಿಕೆಗಳನ್ನು ಪಡೆದುಕೊಂಡೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸುಳ್ಳು. ಚಾ.ಸಾ.9 ಮತ್ತು 10 ರ ಹೇಳಿಕೆಗಳನ್ನು ನಿ.ಪಿ.12 ಮತ್ತು 13 ರಂತೆ ಮಾಡಿಕೊಂಡೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸುಳ್ಳು. ಚಾ.ಸಾ.13 ರವರ ಹೇಳಿಕೆ ಪಡೆದೆ ಹಾಗೂ 65 ಬಿ ಪ್ರಮಾಣ ಪತ್ರ ಪಡೆದುಕೊಂಡೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸುಳ್ಳು. ಚಾ.ಸಾ.13 ನುರಿತ ಫೋಟೋಗ್ರಾಫರ್ ಅಲ್ಲ ಎಂದರೆ ಸಾಕ್ಷಿಯು ಇಲಾಖೆಯಲ್ಲಿ ತರಭೇತಿ ಕೊಟ್ಟಿರುತ್ತಾರೆ ಎನ್ನುತ್ತಾರೆ. ಅದರ ಬಗ್ಗೆ ಯಾವುದೇ ದಾಖಲೆ ಹಾಜರುಮಾಡಿಲ್ಲ.

34. ಫೋಟೋ ತೆಗೆದಾಗ ಡೇಟ್, ಟೈಮ್ ಹಾಗೂ ಸ್ಥಳ ನೋಟ್ ಆಗುತ್ತದೆ ಎಂದರೆ ಸಾಕ್ಷಿಯು ನಮಗೆ ಕೊಟ್ಟ ಇನ್ಸ್ಟ್ರುಮೆಂಟ್ ನಲ್ಲಿ ಆ ತರದ ಸಲಕರಣೆ ಇರಲಿಲ್ಲ ಎನ್ನುತ್ತಾರೆ.

35. ನಾವು ನಿಜವಾಗಲೂ ಸ್ಥಳಕ್ಕೆ ಹೋಗಿದ್ದರೆ ಫೋಟೋ ತೆಗೆದಿದ್ದರೆ, ಫೋಟೋ ತೆಗೆದ ಸಮಯದಲ್ಲಿ ಡೇಟ್ ಮತ್ತು ಟೈಮ್ ನಮೂದಾಗುತ್ತ ಇತ್ತು ಎನ್ನುವುದು ಸುಳ್ಳು. ನಾನು ನಮ್ಮ ಇಲಾಖೆಯವರು ಕೊಟ್ಟ ಇನ್ಸ್ಟ್ರುಮೆಂಟ್ ಗಳನ್ನು ಆ ತರಹದ ಸೌಲಭ್ಯ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸುಳ್ಳು.

36. ತನಿಖಾ ಕಾಲದಲ್ಲಿ ಚಾ.ಸಾ.1 ರಕ್ತದ ಮಡುವಿನಲ್ಲಿ ಬಿದ್ದಿದ್ದ, ಆತನನ್ನು ಮಾನವೀಯತೆಯ ಆಧಾರದ ಮೇಲೆ ಆರೋಪಿತರು ಆತನನ್ನು ಆಸ್ಪತ್ರೆಗೆ ಸೇರಿಸಿದರು ಎಂದು ಸುಳ್ಳು ಹೇಳಿದ್ದೇನೆ ಎನ್ನುವುದು ಸುಳ್ಳು. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸುಳ್ಳು. ಘಟನೆಗೂ ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲ ಎನ್ನುವುದು ಸುಳ್ಳು. ಮುದ್ದೆಮಾಲಿಗೂ ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲ ಎನ್ನುವುದು ಸುಳ್ಳು. ಆರೋಪಿತರು ತಪ್ಪು ಮಾಡದೇ ಇದ್ದರೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸುಳ್ಳು.

ಮರುವಿಚಾರಣೆಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ . ಹೇ. ಕೇ. ಸರಿಯಾಗಿದೆ.

(ಕೃಷ್ಣಮೂರ್ತಿ ಆರ್. ಪಡಸಲಗಿ)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದಾವಣಗೆರೆ.